<u>ಅಸಲು ದಾವಾ ಸಂಖ್ಯೆ **- 181/2023**</u>                ಡಿ.ಡಬ್ಲ್ಯೂ**:-1**

ದಿನಾಂಕಃ **13.11.2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು :- ವಾದಿ ಪರ ವಕೀಲರಿಂದ :-</u>

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ವಿಚಾರಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ವಿಚಾರಗಳು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ವಾದಿಯ ಜಮೀನನ್ನು ವಾದಿಯ ಜಮೀನನ್ನು ಒತ್ತುವರಿ ಮಾಡಿರುವುದಿಲ್ಲ ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಆದರೆ ನಾವು ವಾದಿಯ ಜಮೀನನ್ನು ಒತ್ತುವರಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಈ ದಾವೆಯಲ್ಲಿ ಪಹಣಿ ಮತ್ತು ನಾನು ಮತ್ತು ನನ್ನ ಅಣ್ಣ ತಮ್ಮಂದಿರುವ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುವ ಬಗ್ಗೆ ವಿಭಾಗ ಪತ್ರವನ್ನು ಹಾಜರುಪಡಿಸಿದ್ದೇನೆ. ನಾನು ಹಾಜರುಪಡಿಸಿರುವ ದಾಖಲಾತಿಗಳು ನನಗೆ ಸೇರಿದ ಆಸ್ತಿಗೆ ಸಂಬಂಧಪಟ್ಟ ದಾಖಲಾತಿಗಳು ಎಂದರೆ ಸರಿ. ನಿಡಿ-1 ರಿಂದ 22 ಹದ್ದುಬಸ್ತು ದಾಖಲಾತಿಗಳು ನಮಗೆ ಸೇರಿದ ಸರ್ವೇ ನಂ.1/2 ಕ್ಕೆ ಸಂಬಂಧಪಟ್ಟ ದಾಖಲಾತಿಗಳು ಎಂದರೆ ಸರಿ. ಸರ್ವೇ ನಂ.1/2 ರ ಆಸ್ತಿಯು 6 ಪೋಡಾಗಿರುತ್ತದೆ. ನಾನು ಸರ್ವೇ ನಂ.1/7, 1/2, 1/9, 1/6, 1/8, 1/2, 1/10 ಕ್ಕೆ ಸಂಬಂಧಪಟ್ಟ ಹದ್ದುಬಸ್ತು ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿ. ನಾನು ಹಾಜರುಪಡಿಸಿದ ನಿಡಿ-1 ರಿಂದ 22 ದಾಖಲಾತಿಗಳಲ್ಲಿ ಸದರಿ ಜಮೀನಿನ ಉತ್ತರ ಭಾಗಕ್ಕೆ ಯಾವುದೇ ಒತ್ತುವರಿ ಆಗಿರುವ ಬಗ್ಗೆ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಸರ್ವೇ ಅಧಿಕಾರಿಗಳು ಸರ್ವೇ ಮಾಡುವ ಸಮಯದಲ್ಲಿ ಯಾರಾದರೂ ಒತ್ತುವರಿ ಮಾಡಿದರೆ ಯಾರ ಜಮೀನು

ಒತ್ತುವರಿಯಾಗಿರುತ್ತದೆ ಅದನ್ನು ಮಾತ್ರ ನಮೂದು ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-32 ರ ವಿಭಾಗ ಪತ್ರದಲ್ಲಿ ನಮೂದಾಗಿರುವ ಚಕ್ಕುಬಂಧಿಯಂತೆ ಸ್ವಾಧೀನಾನುಭವದಲ್ಲಿರುವಂತೆ ನನಗೆ ಯಾವುದೇ ತೊಂದರೆ ಇರುವುದಿಲ್ಲ. ಸರ್ವೇ ನಂ.1/3 ಕ್ಕೆ ಸಂಬಂಧಪಟ್ಟಂತೆ ವಾದಿಯು ಸ್ವಾಧೀನಾನುಭವದಲ್ಲಿರುವುದಕ್ಕೆ ನನ್ನ ಕಡೆಯಿಂದ ಯಾವುದೇ ತೊಂದರೆ ಇರುವುದಿಲ್ಲ. ವಾದಿಯ ಜಮೀನನ್ನು ನಾವು ಒತ್ತುವರಿ ಮಾಡಿದ್ದರಿಂದ ವಾದಿ ದಾವೆಯನ್ನು ಸಲ್ಲಿದ್ದಾರೆ ಎಂದರೆ ಸರಿಯಲ್ಲ. ವಾದಿಗೆ ಸೇರಿದ ಜಮೀನನ್ನು ಒತ್ತುವರಿ ಮಾಡಿದ್ದರೂ ಸಹ ಒತ್ತುವರಿ ಮಾಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಬೇಕಾದರೆ ಸರ್ವೇ ಮಾಡಿಸಿಕೊಳ್ಳಲು ನಾನು ಯಾವುದೇ ಒತ್ತುವರಿ ಮಾಡಿಲ್ಲ ಎಂದು ನುಡಿಯುತ್ತಾರೆ. ನ್ಯಾಯಾಲಯದಿಂದ ಸರ್ವೇ ಅಧಿಕಾರಿಯನ್ನು ನೇಮಕ ಮಾಡಿ ನನಗೆ ಮತ್ತು ವಾದಿಗೆ ಸೇರಿದ ಆಸ್ತಿಗಳನ್ನು ಸರ್ವೇ ಮಾಡಲು ನನ್ನಿಂದ ಯಾವುದೇ ತೊಂದರೆ ಇರುವುದಿಲ್ಲ. ವಾದಿಗೆ ಸೇರಿದ 6 ಗುಂಟೆ ಜಮೀನಿಗೆ ದಿಃ 24-04-2023 ರಂದು ವಾದಿಗೆ ಸೇರಿದ ಬಿ ಶೆಡ್ಯೂಲ್ ಆಸ್ತಿಗೆ ತೊಂದರೆ ಕೊಟ್ಟಿದ್ದರಿಂದ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ವಾದಿಯ ದಾವಾ ಆಸ್ತಿಯನ್ನು ನಾನು ಒತ್ತುವರಿ ಮಾಡಿದ್ದರೂ ಸಹ ಒತ್ತುವರಿ ಮಾಡಿಲ್ಲ ಎಂದು ಸುಳ್ಳು ಪ್ರತಿವಾದ ಪತ್ರವನ್ನು ಸಲ್ಲಿಸಿ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.